<u>ಕರ್ನಾಟಕ ಸರ್ಕಾರದ ನಡವಳಗಳು</u>

ವಿಷಯ: ಕೇಂದ್ರ ಸರ್ಕಾರದ ಅಮೃತ್ ಅಭಿಯಾನದ "Formulation of GIS based Master Plan" ಉಪ ಸುಧಾರಣೆ ಯೋಜನೆಯಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶಗಳ ಪರಿಷ್ಕತ ಮಹಾಯೋಜನೆಗಳನ್ನು Geographic Information System (GIS) ನಲ್ಲಿ ತಯಾರಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ ನಅಇ 248 ಸಿಎಸ್ಎಸ್ 2015, ಬೆಂಗಳೂರು ದಿನಾಂಕ:26.7.2016.
2. ದಿನಾಂಕ:16.6.2016 ರಂದು ಜರುಗಿದ SHPSC ಸಮಿತಿಯ 4ನೇ ಸಭೆಯ ನಡವಳಗಗಳು.
3. ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ರವರ ಕಡತ ಸಂಖ್ಯೆ: ಕೆಎಂಡಿಎಸ್/ ನ.ನ.ಕೋ/ 2017-18/ ಅಮೃತ್-1/3

******

**ಹಿನ್ನಲೆ:**

ಅಮೃತ್ ಅಭಿಯಾನದ "Formulation of GIS based Master Plan" ಉಪ ಸುಧಾರಣೆ ಯೋಜನೆಯಡಿಯಲ್ಲಿ ರಾಜ್ಯದ 27 ನಗರ/ ಪಟ್ಟಣಗಳನ್ನು ಒಳಗೊಂಡಿದ್ದು, ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ಅನುದಾನವನ್ನು ನೀಡುತ್ತಿದೆ. ಈ ಉಪ ಸುಧಾರಣೆಯನ್ನು ಬೆಂಗಳೂರು ಹೊರತು ಪಡಿಸಿ ಉಳದ 26 ಪಟ್ಟಣಗಳಲ್ಲಿ ಅನುಷ್ಠಾನಗೊಳಸಲು ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯನ್ನು Nodal agency ಯನ್ನಾಗಿ ನೇಮಿಸಲಾಗಿದೆ. ಮೇಲೆ ಓದಲಾದ (2) ರ ನಡವಳಯಲ್ಲಿ ಅಮೃತ್ ಯೋಜನೆಯಡಿಯ ರಾಜ್ಯ ಮಟ್ಟದ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿ (SHPSC) ಯು ನಗರ ನಕ್ಷೆ ಕೋಶಕ್ಕೆ ಸದರಿ ಕಾರ್ಯದ ಅನುಷ್ಠಾನದ ಜವಾಬ್ದಾರಿಯನ್ನು ನೀಡಲಾಗಿದೆ.

ಅಮೃತ್ ಅಭಿಯಾನದಡಿಯಲ್ಲಿರುವ ಎಲ್ಲಾ 27 ಪಟ್ಟಣಗಳಗೂ ಈಗಾಗಲೇ ಮಹಾಯೋಜನೆಗಳು ಇದ್ದು, ಇದರಲ್ಲಿ ಹಲವು ಪಟ್ಟಣಗಳ ಯೋಜನಾ ಅವಧಿ ಮುಕ್ತಾಯದ ಹಂತವನ್ನು ತಲುಪಿರುವುದರಿಂದ, ಇವುಗಳಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಪರಿಷ್ಕತ ಮಹಾಯೋಜನೆಗಳನ್ನು ತಯಾರಿಸುವ ಅವಶ್ಯಕತೆಯಿರುತ್ತದೆ. ಮುಂದುವರೆದು, ಅಮೃತ್ ಅಭಿಯಾನದಡಿಯಲ್ಲಿರುವ ಬಹುತೇಕ ನಗರ/ಪಟ್ಟಣಗಳಗೆ Geographic Information System (GIS) ನಲ್ಲಿ ತಯಾರಿಸಲಾದ ಮೂಲ ನಕ್ಷೆಗಳು ನಗರ ನಕ್ಷೆ ಕೋಶದಲ್ಲಿ ಲಭ್ಯವಿದ್ದು, ಅವುಗಳನ್ನು ಸೂಕ್ತ ರೀತಿಯಲ್ಲಿ ಕಾಲೋಚಿತಗೊಳಸಿ ಅಮೃತ್ ಅಭಿಯಾನದಡಿಯ ನಿಯಮಾವಳಗಳನ್ನು ಅಳವಡಿಸಿಕೊಂಡು Geographic Information System (GIS) ನಲ್ಲಿ ಪರಿಷ್ಕತ ಮಹಾಯೋಜನೆಗಳನ್ನು ತಯಾರಿಸುವ ಅವಶ್ಯಕತೆಯನ್ನು ಗಮನಿಸಿ ಕಾರ್ಯದರ್ಶಿಗಳು, ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ರವರು ಮೇಲೆ ಓದಲಾದ (3) ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

--2

ಕಾರ್ಯದರ್ಶಿಗಳು, ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 318 ಸಿಎಸ್‌ಎಸ್ 2017,**
**ಬೆಂಗಳೂರು ದಿನಾಂಕ:16-12-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಅಮೃತ್ ಅಭಿಯಾನದಡಿಯಲ್ಲಿರುವ 27 ಪಟ್ಟಣಗಳಲ್ಲಿ ಮಹಾಯೋಜನಾ ಅವಧಿ ಮುಕ್ತಾಯದ ಹಂತವನ್ನು ತಲುಪಿರುವ ನಗರ/ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಅಮೃತ್ ನಿಯಮಾವಳಿಗಳನ್ನು ಅಳವಡಿಸಿಕೊಂಡು Geographic Information System (GIS) ನಲ್ಲಿ ಮಹಾಯೋಜನೆ (ಪರಿಷ್ಕೃತ) ಯನ್ನು ಶೀಘ್ರವಾಗಿ ತಯಾರಿಸಲು ಈ ಮೂಲಕ ಆದೇಶಿಸಲಾಗಿದೆ. ಸದರಿ ಪರಿಷ್ಕೃತ ಮಹಾಯೋಜನೆಗಳನ್ನು ತಯಾರಿಸಲು ನಗರ ನಕ್ಷೆ ಕೋಶದಲ್ಲಿ ಲಭ್ಯವಿರುವ Geographic Information System (GIS) ಮೂಲ ನಕ್ಷೆಗಳನ್ನು ಸೂಕ್ತ ರೀತಿಯಲ್ಲಿ ಕಾಲೋಚಿತಗೊಳಿಸಿ, ಉಪಯೋಗಿಸಿಕೊಳ್ಳತಕ್ಕದ್ದು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ತಯಾರಿಸುವ Terms of Reference (TOR) ಅನ್ವಯ ಅನುಷ್ಠಾನಗೊಳಿಸಲು ಆದೇಶಿಸಿದೆ. ಪರಿಷ್ಕೃತ ಮಹಾಯೋಜನೆಗಳು ಅಮೃತ್ ನಿಯಮಾವಳಿಯನ್ವಯ Geographic Information System (GIS) ನಲ್ಲಿ ಇರುವ ಬಗ್ಗೆ ಕೆ.ಎಂ.ಡಿ.ಎಸ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ನಕ್ಷೆ ಕೋಶವು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಲಲಿತಾಬಾಯಿ. ಕೆ
(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಯೋಮೇಕೋ),
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಹಾಗೂ ನೋಡಲ್ ಅಧಿಕಾರಿ, ಅಮೃತ್.
3. ಸರ್ಕಾರದ ಉಪ ಕಾರ್ಯದರ್ಶಿಗಳು-2, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು
5. ಜಂಟಿ ನಿರ್ದೇಶಕರು, ನ.ನ.ಕೋಶ, ಬೆಂಗಳೂರು.
6. ಜಂಟಿ ನಿರ್ದೇಶಕರು (ಹಣಕಾಸು), ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
7. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೆ.ಜಿ.ಎಫ್, ಮಂಡ್ಯ, ಉಡುಪಿ, ಬೆಂಗಳೂರು, ಹೊಸಪೇಟೆ, ದಾವಣಗೆರೆ-ಹರಿಹರ, ಬಾಗಲಕೋಟೆ, ಹುಬ್ಬಳ್ಳಿ-ಧಾರವಾಡ, ವಿಜಯಪುರ, ಗದಗ-ಬೆಟಗೇರಿ, ತುಮಕೂರು, ಹಾಸನ, ಚಿತ್ರದುರ್ಗ, ಮಂಗಳೂರು, ಕೋಲಾರ, ಬಳ್ಳಾರಿ, ಕಲಬುರ್ಗಿ, ಚಿಕ್ಕಮಗಳೂರು, ಮೈಸೂರು, ಶಿವಮೊಗ್ಗ-ಭದ್ರಾವತಿ, ಬೆಳಗಾವಿ, ಬೀದರ್ ಮತ್ತು ರಾಯಚೂರು.
8. ಸದಸ್ಯ ಕಾರ್ಯದರ್ಶಿಗಳು, ಯೋಜನಾ ಪ್ರಾಧಿಕಾರ, ಬಾದಾಮಿ, ರಾಣೇಬೆನ್ನೂರು ಹಾಗೂ ಗಂಗಾವತಿ.

ಸಂಖ್ಯೆ: ನಗ್ರಾಯೋ:ಜಂನಿ:CIRC:2017-18
ಸರ್ಕಾರದ ಪತ್ರ ಸಂ:ನಅಇ 318 ಸಿಎಸ್‌ಎಸ್ 2017
ದಿನಾಂಕ:16-12-2017

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕಃ

31 MAR 2018

<u>ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.</u>

1) ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ.
2) ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
3) ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು/ ಮೈಸೂರು/ ಗುಲ್ಬರ್ಗಾ.
4) ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು
5) ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
6) ಮುಖ್ಯಾಧಿಕಾರಿಗಳು/ಆಯುಕ್ತರು, ಪುರಸಭೆ/ ನಗರಸಭೆ ಯೋಜನಾ ಪ್ರಾಧಿಕಾರಗಳು.
7) ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗಳಿಗೆ.
8) ಕೇಂದ್ರ ಕಛೇರಿಯ ಎಲ್ಲಾ ತಾಂತ್ರಿಕ ಸಿಬ್ಬಂದಿಗಳಿಗೆ.
9) ಹೆಚ್ಚುವರಿ ಪ್ರತಿಗಳು.

28/3/18

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರ ಪರವಾಗಿ

o/c

28.03.18

o/c

31/3/18
ರವಾನಿಸಲಾಗಿದೆ